ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ ಐವಾನ್-ಎ-ಶಾಹಿ-ಬಡಾವಣೆ ಕಲಬುರಗಿ**

ಸಂಖ್ಯೆ:ಸಿ2(1)/ಆಡಳಿತ/ಮು.ಶಿ/ಸಾ.ವರ್ಗ/04/2024-25

ದಿನಾಂಕ: 08/08/2024

**ಜ್ಞಾಪನ**

ವಿಷಯ: 2023-24ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗೆ ಸಂಬಂಧಿಸಿದಂತೆ ವಿಭಾಗದ ಒಳಗೆ ಕೋರಿಕೆ ವರ್ಗಾವಣೆಗೆ ಮತ್ತು ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕನಿಷ್ಠ ಸೇವೆ(03 ವರ್ಷ ಮೇಲ್ಪಟ್ಟು ಮತ್ತು 05 ವರ್ಷ ಒಳಗೆ) ಪೂರ್ಣಗೊಳಿಸಿದ ಅಧಿಕಾರಿಗಳು ವರ್ಗಾವಣೆಗೆ ಅರ್ಜಿ ಸಲ್ಲಿಸಿ ಅರ್ಹರಾದ ಶಿಕ್ಷಕರ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ: 1) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ:ಸಿ3(07). ಪ್ರಾ.ಪೌ.ಶಾ.ಶಿ ಸಾಮಾನ್ಯ ವರ್ಗಾವಣೆ/01/2023-24 ದಿನಾಂಕ: 15/03/2024 ಮತ್ತು 15/06/2024

2) ಈ ಕಛೇರಿ ಜ್ಞಾಪನಾ ಪತ್ರ ದಿನಾಂಕ: 10/07/2024ರಂದು ಪ್ರಕಟಿಸಿರುವ ತಾತ್ಕಾಲಿಕ ಕೌನ್ಸಿಲಿಂಗ ಆದ್ಯತಾ ಪಟ್ಟಿ.

3) ವಿಭಾಗದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರು ಹಾಗೂ ಬಾಧಿತ ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆಗಳು.

4) ವರ್ಗಾವಣೆ ತಂತ್ರಾಂಶದ ಮೂಲಕ ದಿನಾಂಕ: 06/08/2024ರಂದು ನೀಡಲಾದ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿ.

******

ಶಾಲಾ ಶಿಕ್ಷಣ ಇಲಾಖೆಯ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗೆ ಉಲ್ಲೇಖ (1) ರನ್ವಯ ಮಾರ್ಗಸೂಚಿ ಹೊರಡಿಸಿ ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿಯನ್ನು ಜಾರಿಗೊಳಿಸಲಾಗಿದೆ.

ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿಯನ್ವಯ 2023-24ನೇ ಸಾಲಿನ ಶಿಕ್ಷಕರ ಸಾಮಾನ್ಯ ವರ್ಗಾವಣೆಗೆ ಸಂಬಂಧಿಸಿದಂತೆ ವಿಭಾಗದೊಳಗಿನ/ವಿಭಾಗದ ಹೊರಗಿನ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅರ್ಹ ಅಧಿಕಾರಿಗಳ ತಾತ್ಕಾಲಿಕ ಕೌನ್ಸಿಲಿಂಗ ಆದ್ಯತಾ ಪಟ್ಟಿ ದಿನಾಂಕ: 10/07/2024ರಂದು ಉಲ್ಲೇಖ (2) ರನ್ವಯ ಪ್ರಕಟಿಸಿ, ಬಾಧಿತರಿಂದ ಆಕ್ಷೇಪಣೆಗಳನ್ನು ವಿಭಾಗದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರ ಮೂಲಕ ಪಡೆದು ನಿಯಮಾನುಸಾರ ಪರಿಶೀಲಿಸಿ, ಇತ್ಯರ್ಥಪಡಿಸಿ, ವಿಭಾಗದೊಳಗಿನ ಕೋರಿಕೆ ವರ್ಗಾವಣೆಗೆ ಹಾಗೂ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕನಿಷ್ಠ ಸೇವೆ (03 ವರ್ಷ ಮೇಲ್ಪಟ್ಟು ಮತ್ತು 05 ವರ್ಷ ಒಳಗೆ) ವಿಭಾಗದೊಳಗಿನ ವರ್ಗಾವಣೆಗೆ ಅರ್ಹರಾಗಿರುವ ಗ್ರೂಪ್-'ಬಿ' ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿಗಳನ್ನು ಹಾಗೂ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಖಾಲಿ ಹುದ್ದೆಗಳ ಪಟ್ಟಿಯನ್ನು ಈ ಕೆಳಗಿನಂತೆ ಅನುಬಂಧ-1 ರಿಂದ 3ರ ವರೆಗೆ ಇಲಾಖಾ ವೆಬ್-ಸೈಟ್ https://cpikalaburgi.karnataka.gov.in ನಲ್ಲಿ ಹಾಗೂ ವಿಭಾಗದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ರವರ ಕಛೇರಿಯಲ್ಲಿ ಪ್ರಕಟಿಸಿದೆ.

ಕೋರಿಕೆ ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸಿರುವ ಪ್ರಕಟಿತ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿಯಲ್ಲಿರುವ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳು ಸ್ಥಳ ಆಯ್ಕೆ ಮಾಡಿಕೊಳ್ಳಲು ಆಯಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರ ಕಛೇರಿಯಲ್ಲಿ ವರ್ಗಾವಣೆ ಮಾರ್ಗಸೂಚಿಯನ್ವಯ ನಿಗದಿಪಡಿಸಿದ ದಿನಾಂಕಗಳಂದು ಮುಂಜಾನೆ 10-00 ಗಂಟೆಗೆ ಹಾಜರಾಗಿ, ಆನ್-ಲೈನ್ ಮೂಲಕ ನಡೆಸಲಾಗುವ ಸ್ಥಳ ಆಯ್ಕೆ ಕೌನ್ಸಿಲಿಂಗನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

**ಅಡಕಗಳು:**

1) ವಿಭಾಗದ ಒಳಗೆ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿ ಅರ್ಹರಾದ ಗ್ರೂಪ್-'ಬಿ' ವೃಂದದ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದವರ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿ.- **ಅನುಬಂಧ-1**
2) ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕನಿಷ್ಠ ನಿಲುಗಡೆ ಪೂರ್ಣಗೊಳಿಸಿ(03 ವರ್ಷ ಮೇಲ್ಪಟ್ಟು ಮತ್ತು 05 ವರ್ಷ ಒಳಗೆ) ಘಟಕದೊಳಗಿನ ವರ್ಗಾವಣೆಗೆ ಕೋರಿ ಸಲ್ಲಿಸಿರುವ ಮತ್ತು ವರ್ಗಾವಣೆಗೆ ಅರ್ಹರಾಗಿರುವ 'ಗ್ರೂಪ್-'ಬಿ' ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಂತಿಮ ಕೌನ್ಸಿಲಿಂಗ ಆದ್ಯತಾ ಪಟ್ಟಿ.- **ಅನುಬಂಧ-2**
3) ದಿನಾಂಕ: **31/07/2024ರಲ್ಲಿರುವಂತೆ** ಗ್ರೂಪ್-'ಬಿ' ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಖಾಲಿ ಹುದ್ದೆಗಳ ಪಟ್ಟಿ- **ಅನುಬಂಧ-3**

ನಿರ್ದೇಶಕರು
ಹಾಗೂ ವರ್ಗಾವಣಾ ಪ್ರಾಧಿಕಾರಿಗಳು
ಅಪರ ಆಯುಕ್ತರ ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.

ಪ್ರತಿಗಳು:

4) ಕಲಬುರಗಿ ವಿಭಾಗದಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ಆಡಳಿತ)ರವರಿಗೆ.
5) ಹಿರಿಯ ಸಹಾಯಕ ನಿರ್ದೇಶಕರು/ಪ್ರೋಗ್ರಾಮರ್ಇ-ಗವರ್ನನ್ಸ್ ವಿಭಾಗದ ಇವರಿಗೆ ನೀಡುತ್ತ, ಸದರಿ ಪಟ್ಟಿಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವಂತೆ ತಿಳಿಸಿದೆ.
6) ಕಛೇರಿ ಪ್ರತಿ.